ಚೆನ್ನಾಗಿ ಪರಿಚಯವಾಗಿದ್ದವು. ನಮ್ಮಪ್ಪ ಕೆಲವು ದಿನಗಳ ಮಟ್ಟಿಗೆ ಊರಿಗೆ ಹೋಗುವಾಗ, ಮತ್ತೆ ಆಗಾಗ ವ್ಯವಹಾರದ ಕಾಗದ ಪತ್ರ ಒಯ್ಯಲೂ ಅದನ್ನು ಬಳಸುತ್ತಿದ್ದರು. ನಾನು ಹುಡುಗನಾಗಿದ್ದಾಗ ನಮ್ಮಪ್ಪ ಪ್ರಯಾಣ ಮುಗಿಸಿಕೊಂಡು ಬಂದು, ಸೂಟ್‌ಕೇಸು ತೆರೆದು, ಅದರೊಳಗಿನ ವಸ್ತುಗಳನ್ನು ತಡಕಾಡುತ್ತಿದ್ದದ್ದು, ಸೂಟ್‌ಕೇಸಿನೊಳಗಿಂದ ಹೊಮ್ಮುತ್ತಿದ್ದ ವಿದೇಶಗಳ ಕೊಲೋನ್ ಪರಿಮಳವನ್ನು ನಾನು ಖುಷಿಯಾಗಿ ಉಸಿರೆಳೆದುಕೊಳ್ಳುತ್ತಿದ್ದದ್ದು ಜ್ಞಾಪಕ ಇದೆ. ಆ ಸೂಟ್‌ಕೇಸು ನಾನು ಬಲ್ಲ ಗೆಳೆಯ, ನನ್ನ ಬಾಲ್ಯದ ನೆನಪುಗಳನ್ನು, ಗತಕಾಲವನ್ನು ಪ್ರಬಲವಾಗಿ ಮನಸ್ಸಿಗೆ ತರುವ ವಸ್ತು, ಆದರೂ ಈಗ ಅದನ್ನು ಮುಟ್ಟಲೂ ಆರೆ, ಯಾಕೆ? ಅದರೊಳಗಿದ್ದ ನಿಗೂಢ ವಸ್ತುಗಳ ಭಾರವೇ ಕಾರಣ, ಅನುಮಾನವೇ ಇಲ್ಲ.

ಈ ಭಾರದ ಅರ್ಥವನ್ನು ಕುರಿತು ಮಾತಾಡುತ್ತೇನೆ. ಕೋಣೆಯೊಂದರಲ್ಲಿ ತನ್ನನ್ನೇ ಕೂಡಿಹಾಕಿಕೊಂಡು, ಮೂಲೆಯಲ್ಲಿ ಟೇಬಲ್ಲಿನ ಮುಂದೆ ಕೂತು, ಮನಸ್ಸಿನಲ್ಲಿರುವ ಆಲೋಚನೆಗಳನ್ನು ವ್ಯಕ್ತಪಡಿಸುವಾಗ ಸೃಷ್ಟಿಯಾಗುವ ಭಾರದ ಬಗ್ಗೆ – ಸಾಹಿತ್ಯದ ಅರ್ಥದ ಬಗ್ಗೆ ಮಾತಾಡುತ್ತೇನೆ.

ಆ ಸೂಟ್‌ಕೇಸನ್ನು ಮುಟ್ಟಿದರೂ ತೆರೆಯುವ ಧೈರ್ಯ ನನಗಾಗಲಿಲ್ಲ. ಆದರೂ ಅದರೊಳಗಿನ ಕೆಲವಾದರೂ ನೋಟ್‌ಬುಕ್ಕಿನಲ್ಲಿ ಏನಿದೆ ಅನ್ನುವುದು ಗೊತ್ತಿತ್ತು. ನಮ್ಮಪ್ಪ ಬರೆಯುವುದು ನೋಡಿದ್ದೆ. ಸೂಟ್‌ಕೇಸಿನೊಳಗಿರುವುದರ ಭಾರ ಕುರಿತು ಕೇಳಿದ್ದು ಇದೇ ಮೊದಲೂ ಅಲ್ಲ. ನಮ್ಮಪ್ಪ ದೊಡ್ಡ ಲೈಬ್ರರಿ ಮಾಡಿಕೊಂಡಿದ್ದರು. ಅವರ ಯೌವನದಲ್ಲಿ, 1940ರ ದಶಕದ ಕೊನೆಯಲ್ಲಿ, ಅವರು ಇಸ್ತಾಂಬುಲ್ ಕವಿಯಾಗಲು ಬಯಸಿದ್ದರು. ಪಾಲ್ ವ್ಯಾಲರಿಯ ಕವಿತೆ ಟರ್ಕಿಶ್‌ಗೆ ಅನುವಾದ ಮಾಡಿದ್ದರು. ಆದರೆ ಬಡದೇಶದಲ್ಲಿ, ಇಲ್ಲವೇ ಇಲ್ಲ ಅನ್ನಿಸುವಷ್ಟು ಕಡಮೆ ಓದುಗರ ಸಲುವಾಗಿ ಕಾವ್ಯ ಬರೆಯುತ್ತ ಬದುಕುವ ರೀತಿ ನಮ್ಮಪ್ಪನಿಗೆ ಇಷ್ಟವಾಗಿರಲಿಲ್ಲ. ನಮ್ಮ ತಾತ, ಅಪ್ಪನ ಅಪ್ಪ, ಶ್ರೀಮಂತ ವ್ಯಾಪಾರಿ. ನಮ್ಮಪ್ಪ ಹುಡುಗನಾಗಿ, ಯುವಕನಾಗಿ ಸುಖದ ಜೀವನ ಸಾಗಿಸಿದ್ದರು. ಸಾಹಿತ್ಯದ ಸಲುವಾಗಿ, ಬರಹದ ಸಲುವಾಗಿ, ಕಷ್ಟದ ಬದುಕು ಆಯ್ದುಕೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ. ನಮ್ಮಪ್ಪ ಬದುಕಿನ ಎಲ್ಲ ಚೆಲುವು ಇಷ್ಟಪಡುತ್ತಿದ್ದರು. ಇದು ನನಗೆ ಗೊತ್ತಾಗಿತ್ತು.

ಸೂಟ್‌ಕೇಸನ್ನು ತೆರೆದರೆ, ಅದರೊಳಗೆ ಇರುವುದನ್ನು ಓದಿದರೆ, ಓದಿದ್ದು ನನಗೆ ಇಷ್ಟವಾಗದಿದ್ದರೆ ಅನ್ನುವ ಭಯ ನನ್ನನ್ನು ಅಪ್ಪನ ಸೂಟ್‌ಕೇಸಿನಿಂದ ದೂರವೇ ಉಳಿಸಿತ್ತು. ನಮ್ಮಪ್ಪನಿಗೂ ಅದು ಗೊತ್ತಿದ್ದರಿಂದ ತನ್ನ ಎಲ್ಲಾ ಬರಹವನ್ನು ತಾನೇ ಗಂಭೀರವಾಗಿ ಪರಿಗಣಿಸಿಲ್ಲ ಅನ್ನುವ ಹಾಗೆ ನಟಿಸುವ ಎಚ್ಚರಿಕೆ ತೋರಿದ್ದರು. ಲೇಖಕನಾಗಿ ಇಪ್ಪತ್ತೈದು ವರ್ಷ ಕಳೆದ ಮೇಲೆ ನಮ್ಮಪ್ಪ ಅನುಭವಿಸಿದ್ದ ಸಂಕಟ ನೆನೆದು ನೋವಾಗುತ್ತದೆ. ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸದೆ ಹೋದದ್ದಕ್ಕೆ ನಮ್ಮಪ್ಪನ ಬಗ್ಗೆ ಕೋಪ ಮಾಡಿಕೊಳ್ಳುವ ಮನಸ್ಸೂ ಇಲ್ಲ. ನನ್ನ ನಿಜವಾದ ಭಯ, ನನ್ನೊಳಗೆ ನಾನೇ ತಿಳಿಯಲು ಕಂಡುಕೊಳ್ಳಲು ಬಯಸದೆ ಇದ್ದ ಸಂಗತಿ ಇದು – ಅಕಸ್ಮಾತ್ ನಮ್ಮಪ್ಪ ಒಳ್ಳೆಯ ಬರಹಗಾರ ಆಗಿದ್ದರೆ ಅನ್ನುವ ಭಾವ. ಈ ಭಯ ನನ್ನಲ್ಲಿ ಇತ್ತು ಅಂತಲೇ ಅಪ್ಪನ ಸೂಟ್‌ಕೇಸು ತೆರೆಯಲು ಆಗಿರಲಿಲ್ಲ. ಇಂಥ ಭಯ ನನ್ನಲ್ಲಿದೆ ಎಂದು ನಾನೇ ಮುಕ್ತವಾಗಿ ಒಪ್ಪಿಕೊಳ್ಳಲೂ ಆಗಿರಲಿಲ್ಲ ಅನ್ನುವುದು ಇನ್ನೂ ಹಿಂಸೆಯ ಸಂಗತಿ. ನಮ್ಮಪ್ಪನ ಸೂಟ್‌ಕೇಸಿನಿಂದ ಮಹಾನ್ ಸಾಹಿತ್ಯಕೃತಿ ಹೊರಬಿದ್ದರೆ ನಮ್ಮಪ್ಪನ ವ್ಯಕ್ತಿತ್ವದೊಳಗೆ ತೀರ ಭಿನ್ನವಾದ ಮನುಷ್ಯನೊಬ್ಬ ಇದ್ದ ಅನ್ನುವುದನ್ನು ಒಪ್ಪಬೇಕಾಗುತ್ತಿತ್ತು. ಇದು ಭಯಂಕರವಾದೊಂದು ಸಾಧ್ಯತೆ. ನನಗೆ